ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಘೋಷಿಸಲಾದ ರ್‍ಯಾಂಕುಗಳ ಸಂಖ್ಯೆ

2158 - ಶ್ರೀ ರಾಜುಗೌಡ (ಹನೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕಳೆದ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಎಷ್ಟು ರ್‍ಯಾಂಕುಗಳನ್ನು ಘೋಷಿಸಲಾಗಿದೆ?*

ಆ) *ಇದನ್ನು ಎಷ್ಟು ವಿದ್ಯಾರ್ಥಿಗಳು ಹಂಚಿಕೊಂಡಿದ್ದಾರೆ?*

ಇ) *ಒಟ್ಟು ಅಂಕಗಳನ್ನು ಪರಿಗಣಿಸಿ ರ್‍ಯಾಂಕ್ ಪೋಷಣೆ ಮಾಡುವುದರಿಂದ ನಗರ ಪ್ರದೇಶದ ಹಾಗೂ ಇಂಗ್ಲೀಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) 20 ರ್‍ಯಾಂಕುಗಳನ್ನು ಘೋಷಿಸಲಾಗಿದೆ.

ಆ) 53 ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಂಚಿಕೊಂಡಿರುತ್ತಾರೆ.

ಇ) ಗಮನಕ್ಕೆ ಬಂದಿದೆ.

ರೈತರ ಸಾಲದ ಮೇಲಿನ ಶೇ. 10ರಷ್ಟು ಸ್ಟಾಂಪ್ ಶುಲ್ಕವನ್ನು ರದ್ದುಪಡಿಸುವ ಬಗ್ಗೆ

2377 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರೈತರ ಸಾಲದ ಮೇಲೆ ಶೇಕಡ 10ರಷ್ಟು ಸ್ಟಾಂಪ್ ಶುಲ್ಕವನ್ನು ವಿಧಿಸುತ್ತಿರುವುದು ನಿಜವಲ್ಲವೇ?*

ಆ) *ರೈತರುಗಳು ಈ ವರ್ಷ ಅತೀವೃಷ್ಟಿಯಿಂದಾಗಿ ಬೆಳೆಗಳನ್ನು ಕಳೆದುಕೊಂಡಿರುವುದರಿಂದ ಸರಕಾರದಲ್ಲಿ ಸಾಲವನ್ನು ಪಾವತಿ ಮಾಡಲು ಸಾಧ್ಯವಾಗದೇ ಇರುವ ಕಾರಣದಿಂದ ಇವರ ಸಾಲದ ಮೇಲಿನ ಶೇಕಡ 10ರಷ್ಟು ಸ್ಟಾಂಪ್ ಶುಲ್ಕವನ್ನು ರದ್ದುಪಡಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ?*

ಇ) *ಇಲ್ಲದಿದ್ದಲ್ಲ ಕಾರಣಗಳೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ. ಸಾವಿರದವರೆಗೆ ಪಡೆಯುವ ಸಾಲಕ್ಕೆ ಸ್ಟಾಂಪ್ ಶುಲ್ಕ ಪೂರ್ಣ ವಿನಾಯಿತಿ ನೀಡಿದೆ. ಈ ಮೊತ್ತಕ್ಕೆ ಮೇಲ್ಪಟ್ಟು ಸಾಲ ಪಡೆದರೆ ಶೇಕಡ 5ರಷ್ಟು ಮಾತ್ರ ಸ್ಟಾಂಪ್ ಶುಲ್ಕ ಕೊಡಬೇಕಾಗುತ್ತದೆ.

ಆ) ಇಲ್ಲ.

ಇ) 'ಅ'ನಲ್ಲಿ ಹೇಳಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊಸ ಕುಲಪತಿಗಳ ನೇಮಕ.

2375 - ಶ್ರೀ ಆರ್.ವಿ. ದೇಶಪಾಂಡೆ, (ಹಳಿಯಾಳ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಮೈಸೂರು ವಿಶ್ವವಿದ್ಯಾಲಯಕ್ಕೆ ಹೊಸ ಕುಲಪತಿಗಳನ್ನು ನೇಮಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಈಗಿರುವ ಕುಲಪತಿಗಳು ಯಾರು?*

ಇ) ಇವರ ಅಧಿಕಾರಾವಧಿ ಮುಗಿದಿದ್ದರೂ ಅವರನ್ನೇ ಇನ್ನೂ ಮುಂದುವರೆಸಲು ಕಾರಣಗಳೇನು?

ಈ) ಎಂದಿನಿಂದ ಹೊಸ ಕುಲಪತಿಗಳನ್ನು ನೇಮಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) ಹೌದು.

ಆ) ದಿನಾಂಕ 2-9-91ರ ಸಂ.ಜೆ.ಎಸ್. 9 ಎಂ.ಯು.ಎಂ. 91ರ ರಾಜಭವನದ ಅಧಿಸೂಚನೆ ಪ್ರಕಾರ ಡಾ. ಎಂ. ಮಾದಯ್ಯ ಅವರನ್ನು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳನ್ನಾಗಿ ನೇಮಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬೆಂಗಳೂರಿನ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ

1825 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನಲ್ಲಿ ಪ್ರೈಮರಿ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ (ಪ್ರಪೋರ್ಶನೇಟ್) ಉಪಾಧ್ಯಾಯರುಗಳಿರುವರೆ?

ಇ) ವಿದ್ಯಾರ್ಥಿಗಳ ಸಂಖ್ಯೆಗೇ ಅನುಗುಣವಾಗಿ ಉಪಾಧ್ಯಾಯರುಗಳಿಲ್ಲದೆ ಇರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅಡಚಣೆ ಉಂಟಾಗುತ್ತಿರುವುದದು ನಿಜವೇ?

ಈ) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಉಪಾಧ್ಯಾಯರನ್ನು ನೇಮಕ ಮಾಡಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಉ) ಈ ರೀತಿ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರುಗಳ ಅನುಪಾತದಲ್ಲಿ (ಪ್ರಪೋರ್ಶನೇಟ್) ವ್ಯತ್ಯಾಸಗಳಿರುವುದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ ಶಾಲೆಗಳ ಮಕ್ಕಳ ಸಂಖ್ಯೆ

1) ಸ.ಪ್ರಾ.ಶಾ. ಮಕ್ಕಳ ಸಂಖ್ಯೆ 108047

2) ಸರ್ಕಾರಿ ಮಾಧ್ಯಮಿಕ ಶಾಲೆ ಮಕ್ಕಳ ಸಂಖ್ಯೆ 189524

3) ಸರ್ಕಾರಿ ಪ್ರೌಢಶಾಲೆಗಳ ಮಕ್ಕಳ ಸಂಖ್ಯೆ 31596

ಆ)1) ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಉಪಾಧ್ಯಾಯರು ಇರುವರು.

2) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ

ಇ) ನಿಜ.

ಈ) ಹೆಚ್ಚುವರಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆ ಭರ್ತಿ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಪ್ರತಿ ವರ್ಷವು ಪ್ರಾಥಮಿಕ ಶಾಲೆಗಳಿಗೆ ಸೇರುವ ಮಕ್ಕಳ ದಾಖಲಾತಿ ಸಂಖ್ಯೆ ಹೆಚ್ಚುತ್ತಿರುವುದರಿಂದ ಮತ್ತು ಕಳೆದ 3 ವರ್ಷಗಳಿಂದ ಹೆಚ್ಚುವರಿ ಶಿಕ್ಷಕರ ಹುದ್ದೆ ಮಂಜೂರಾಗದೇ ಇರುವುದರಿಂದ ಅನುಪಾತದಲ್ಲಿ ವ್ಯತ್ಯಾಸವಿದೆ.